PW-1

**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ , ಕನಕಪುರ**
**C.C. 660.2017**

**ದಿನಾಂಕ 02.06.2026 ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ Sri. CRP ವಕೀಲರಿಂದಃ**

ನನಗೆ ಈಗ ಹುಷಾರಿದ್ದು , ಕೇಳುವ ಪ್ರಶ್ನೆಗೆ ಸರಿಯಾಗಿ ಉತ್ತರ ನೀಡುವ ಮನಸ್ಥಿ.ತಿಯಲ್ಲಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನೀವು ನಿಮ್ಮ ಪ್ರಮಾಣ ಪತ್ರದಲ್ಲಿ 5 ನಿವೇಶನಗಳನ್ನು ಖರೀದಿ ಮಾಡಲು ಆರೋಪಿಗೆ ಹಣ ನೀಡಿರುವುದಾಗಿ ಹೇಳಿರುತ್ತೀರಿ ಎಂದರೆ ಸರಿ . ಆರೋಪಿ ನಿಮಗೆ ಹೇಗೆ ಪರಿಚಯ ಎಂಬ ಪ್ರಶ್ನೆಗೆ ಸಾಕ್ಷಿದಾರರು ಶಾಂತಕುಮಾರ್ ಎಂಬ ವೈದ್ಯರು ನನ್ನ ಸ್ನೇಹಿತರಾಗಿದ್ದು ಅವರ ಜೊತೆ ಆರೋಪಿ ಒಕ್ಕಲಿಗರ ಸಂಘಕ್ಕೆ ಬಂದಿರುತ್ತಾರೆ ಅಲ್ಲಿಂದ ಪರಿಚಯ ಆಗಿರುತ್ತಾರೆ. ನಿಮಗೆ ಆರೋಪಿಯ ಪರಿಚಯ ಇಲ್ಲ , ಅವರ ತಮ್ಮ ಅಜಿತ್ ರವರ ಪರಿಚಯ ಇದೆ ಎಂದರೆ ಸಾಕ್ಷಿದಾರರು ಇಬ್ಬರ ಪರಿಚಯವೂ ಇದೆ ಎಂದು ನುಡಿಯುತ್ತಾರೆ. ನೀವು ಆರೋಪಿಯ ಬಳಿ ವ್ಯವಹಾರ ಮಾಡಿರುವುದಿಲ್ಲ , ಅಜಿತ್ ಬಳಿ ವ್ಯವಹಾರ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಈ ವ್ಯವಹಾರವನ್ನು ಹೊರತು ಪಡಿಸಿ ಬೇರೆ ವ್ಯವಹಾರವನ್ನು ಆರೋಪಿಯ ಬಳಿ ಮಾಡಿರುತ್ತೀರಾ ಎಂದರೆ ಇಲ್ಲ. ನೀವು ಅವರಿಗೆ

ನೀಡಿರುವ ಹಣಕ್ಕೆ ಸಂಬಂಧ ಯಾವುದಾದರೂ ಲೆಕ್ಕದ ಪುಸ್ತಕ ಇಟ್ಟಿರುವಿರಾ ಎಂದರೆ ಸಾಕ್ಷಿದಾರರು ಇಲ್ಲ, ಆರೋಪಿ ನಮ್ಮ ಮನೆಯ ಬಳಿ ಬಂದು ಹಣ ಪಡೆದುಕೊಂಡು ಹೋಗುತ್ತಿದ್ದರು.ಆರೋಪಿ ನಮ್ಮ ಮನೆಯ ಬಳಿ ಬಂದು ಹಣ ಪಡೆದಿರುವ ಸಂಬಂಧ ಯಾವುದೇ ಪುಸ್ತಕದಲ್ಲಿ ಬರೆದು ಇಟ್ಟಿರುವುದಿಲ್ಲ. ಆರೋಪಿ ನಿಮ್ಮ ಬಳಿ 65 ಲಕ್ಷ ಹಣವನ್ನು ನಿವೇಶನ ಕೊಡಿಸುವುದಾಗಿ ಪಡೆದಿರುವ ಸಂಬಂಧ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ವಿಶ್ವಾಸ ಇದ್ದ ಕಾರಣ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿ ಅವರ ಹೆಸರಿನಲ್ಲಿರುವ ಚೆಕ್ ಅನ್ನು ನಿಮಗೆ ಕೊಟ್ಟಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆರೋಪಿಯು ತನ್ನ ಹೆಸರಿನಲ್ಲಿದ್ದ ಒಂದು ಚೆಕ್ ಅನ್ನು ಹಾಗೂ ಕಂಪನಿಯ ಹೆಸರಿನಲ್ಲಿದ್ದ ಒಂದು ಚೆಕ್ ಅನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ.ಆರೋಪಿ ಕಂಪನಿಯಲ್ಲಿ ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ 65 ಲಕ್ಷ ಹಣ ಕೊಟ್ಟಾಗ ಅದರ ಬಗ್ಗೆ ಲಿಖಿತ ರೂಪದಲ್ಲಿ ಬರೆದುಕೊಳ್ಳುತ್ತಾರೆ , ನೀವು ಯಾಕೆ ಬರೆದುಕೊಂಡಿಲ್ಲ ಎಂದರೆ ಸಾಕ್ಷಿದಾರರು ಅವರು ನನ್ನ ಜೊತೆ ಅಷ್ಟು ವಿಶ್ವಾಸದಿಂದ ಇದ್ದರು ಎಂದು ನುಡಿಯುತ್ತಾರೆ. 5 ನಿವೇಶನಗಳ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ , ನನ್ನ ಬಳಿ ಇದೆ. ದಾಖಲಾತಿಗಳಲ್ಲಿ ನಿವೇಶನಗಳು ಯಾರ ಹೆಸರಿನಲ್ಲಿತ್ತು ಎಂದು

ಹೇಳಬಹುದಾ ಎಂದರೆ ಸಾಕ್ಷಿದಾರರು ಉಲ್ಲಾಸ್ ಚಡಾಗರ್ ಮತ್ತು ಅಜಿತ್ ಚಡಾಗರ್ ರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.

ನಿಮ್ಮ ದೂರಿನಲ್ಲಿ 5 ನಿವೇಶನಗಳ ವಿಸ್ತೀರ್ಣ ದ ಬಗ್ಗೆ ಹೇಳಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ 65 ಲಕ್ಷ ಹಣವನ್ನು ಯಾವ ಮೂಲದಿಂದ ಕೊಟ್ಟಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಸಂಪಾದನೆ, ನನ್ನ ಸ್ನೇಹಿತರು, ನನ್ನ ಇಬ್ಬರು ಮಕ್ಕಳ ಸಂಪಾದನೆಯಿಂದ ಕೊಟ್ಟಿರುವುದಾಗಿ ನುಡಿಯುತ್ತಾರೆ. ಸದರಿ 65 ಲಕ್ಷ ದಲ್ಲಿ ಯಾರು ಎಷ್ಟು ಹಣ ನೀಡಿರುತ್ತಾರೆ ಎಂಬ ಬಗ್ಗೆ ನಿಮ್ಮ ದೂರಿನಲ್ಲಿ ವಿವರಿಸಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಹಣವನ್ನು ಪಡೆಯುವಾಗ ಬರವಣಿಗೆಯಲ್ಲಿ ಹಣ ಪಡೆದಿರುವ ಬಗ್ಗೆ ನಮೂದು ಮಾಡಿರುವುದಿಲ್ಲ. ಆರೋಪಿಗೆ ಹಣವನ್ನು ನಗದು ರೂಪ ದಲ್ಲಿ ಬಂದಾಗೆಲ್ಲಾ ಕೊಟ್ಟಿರುತ್ತೇನೆ. ಆರೋಪಿಗೆ ಹಣವನ್ನು ನೀಡುವಾಗ ಸಾಕ್ಷಿಗಳು ಇದ್ದರು. ಅವರುಗಳೆಂದರೆ ವಿನೋದ್ ಗೌಡ ಮತ್ತು ಲಕ್ಷ್ಮೀನಾರಾಯಣ. ಮತ್ತೊಬ್ಬ ರಾಜಗೋಪಾಲ ರೆಡ್ಡಿ ತೀರಿಕೊಂಡಿರುತ್ತಾರೆ. ಸದರಿ ಸಾಕ್ಷಿಗಳ ಹೆಸರನ್ನು ನಿಮ್ಮ ಈ ಪ್ರಕರಣದ ಸಾಕ್ಷಿಗಳ ಪಟ್ಟಿಯಲ್ಲಿ ಹೇಳಿರುತ್ತೀರಾ ಎಂದರೆ ಗೊತ್ತಿಲ್ಲ. ನೀವು 65 ಲಕ್ಷ ಆರೋಪಿಗೆ ಕೊಟ್ಟಿರುವ ಸಂಬಂಧ IT Returners ನಲ್ಲಿ ತೋರಿಸಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಮೋಸ ಮಾಡಿರುವ ಸಂಬಂಧ ಆರೋಪಿಯ ವಿರುದ್ಧ ಚೀಟಿಂಗ್ ಹಗರಣದ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದೀರಾ ಎಂದರೆ ಸಾಕ್ಷಿದಾರರು ಒಂದು ಬಾರಿ ಪೋಲಿಸರ ಬಳಿ ದೂರು

ನೀಡಿರುವುದಾಗಿ ನುಡಿಯುತ್ತಾರೆ. ಅದರ ಸಂಬಂಧ ದಾಖಲೆ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಈ ಪ್ರಕರಣವನ್ನು ಹೊರತುಪಡಿಸಿ ಆರೋಪಿಯ ವಿರುದ್ಧ Recovery ದಾವೆ ಹಾಕಿರುವುದಿಲ್ಲ. ಆರೋಪಿ ನಿಮಗೆ 3 ಲಕ್ಷ ವಾಪಸ್ ನೀಡಿರುವ ಬಗ್ಗೆ ದೂರಿನಲ್ಲಿ ಹೇಳಿರುತ್ತೀರಿ , ಆ ಸಂಬಂಧ ದಾಖಲೆ ಹಾಕಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆರೋಪಿಯು 4 ಲಕ್ಷ 87 ಸಾವಿರ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕಿದ್ದು ಅದರ ಸಂಬಂಧ ದಾಖಲೆ ನನ್ನ ಬಳಿ ಇದೆ ಎಂದು ನುಡಿಯುತ್ತಾರೆ. ಆ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಆರೋಪಿಗೆ ಕೈ ಸಾಲವನ್ನು ನೀಡಿರುವ ಬಗ್ಗೆ ದೂರಿನಲ್ಲಿ ಹಾಗೂ ನಿಮ್ಮ ನೋಟಿಸ್ ನಲ್ಲಿ ಹೇಳಿರುತ್ತೀರಿ ಎಂದರೆ ಸಾಕ್ಷಿದಾರರು ಸರಿಯಲ್ಲ , ನಿವೇಶನಕ್ಕಾಗಿ ಸಾಲ ನೀಡಿರುವುದಾಗಿ ಹೇಳುತ್ತಾರೆ.

ಆರೋಪಿ 2 ಚೆಕ್ ಅನ್ನು ಎಲ್ಲಿ ಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಬೆಂಗಳೂರಿನ , ಪದ್ಮನಾಭ ನಗರದಲ್ಲಿರುವ ಆರೋಪಿಯ ಮನೆಯಲ್ಲಿ ಎರಡು ಚೆಕ್ ಅನ್ನು ಕೊಟಿಟರುವುದಾಗಿ ನುಡಿಯುತ್ತಾರೆ. ಆರೋಪಿ ಮತ್ತು ಆತನ ತಮ್ಮನ ಮಗೆ ವಿಜಯ್ ರವರನ್ನು ಬನಶಂಕರಿ ಠಾಣೆಗೆ ಕರೆಯಿಸಿ ಅವರ ಬಳಿ ಒತ್ತಾಯದಿಂದ ಚೆಕ್ ಅನ್ನು ಪಡದಿರುತ್ತೀರಿ ಎಂದರೆ ಸಾಕ್ಷಿದಾರರು ಸರಿಯಲ್ಲ , ವಿಜಯ್ ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸ್ ಅಧಿಕಾರಿ ಕೆಂಪಯ್ಯ ನಿಮಗೆ ಪರಿಚಯ ಎಂದರೆ ಸರಿ . ಅವರ ಪ್ರಭಾವದಿಂದ ಆರೋಪಿಯನ್ನು ಬನಶಂಕರಿ ಕಛೇರಿಗೆ ಕರೆಯಿಸಿ ಚೆಕ್ ಅನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ಎರಡು ವ್ಯವಹಾರವೂ ಒಂದೇ ಆಗಿದ್ದಾಗ

ಎರಡು ಪ್ರಕರಣವನ್ನು ಯಾಕೆ ದಾಖ್ಲಿಸಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೊದಲ ಚೆಕ್ ಅನ್ನು ದಿನಾಂಕ 15.03.2017 ರಂದು ಹಾಗೂ 12.03.2017 ರಂದು ಮತ್ತೊಂದು ಚೆಕ್ ಅನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ. ಆರೋಪಿಯ ಕಂಪನಿಗೆ ನೋಟಿಸ್ ಕೊಟ್ಟಿದ್ದಿಃರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ನೀವು 5 ನಿವೇಶನಗಳ ವಿಚಾರವಾಗಿ ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ. ಎಂ. ಎಫ್. ಸಿ., ಕನಕಪುರ